**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ. ಎಫ್. ಸಿ ರವರ ನ್ಯಾಯಾಲಯ**
ಕನಕಪುರ

**ಸಿ. ಸಿ. ಃ 1347/2017**

**ದೋಷರೋಪಣೆ**

ಶ್ರೀ. ಸುರೇಶ ಅಣ್ಣಪ್ಪ ಸವದಿ., ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ. ಎಫ್. ಸಿ ರವರ ನ್ಯಾಯಾಧೀಶರು,ಕನಕಪುರ , ಆದ ನಾನು ಈ ಕೆಳಗಿನ ಆರೋಪಿತರಾದ

ಆರೋಪಿತರಾದ ಃ6. ಪಾರ್ವತಮ್ಮ ಉಃ ಪದ್ಮಮ್ಮ
ಕೋಂ ಜಯರಾಮಪ್ಪ
ವಯಸ್ಸು 40 ವರ್ಷಗಳು,
ವಾಸಃ ಸಿದ್ದರ್ಥಾನಗರ, ಬೇಗೂರು ಹೋಬಳಿ
ಬೆಂಗಳೂರು

**ಎಂಬ ನಿಮ್ಮಗಳ ಮೇಲೆ ಹೊರೆಸುವ ದೋಷಾರೋಪವೇನೆಂದರೆಃ-**

ದಿನಾಂಕ 01.11.2006 ರಂದು ಮಧ್ಯಾಹ್ನ ಸುಮಾರು 1ಃ00 ಗಂಟೆ ಸಮಯದಲ್ಲಿ ಕನಕಪುರ ಪುರ ಪೊಲೀಸ್ ಠಾಣಾ ಸರಹದ್ದು, ಕನಕಪುರ ತಾಲ್ಲೂಕು, ಕನಕಪುರ ನಗರದ ಪೊಲೀಸ್ ಠಾಣೆಯ ಮುಂಭಾಗದ ಸಾರ್ವಜನಿಕ ರಸ್ತೆಯಲ್ಲಿ 6 ನೇ ಆರೋಪಿಯಾದ ನೀವು 1 ರಿಂದ 5 ನೇ ಆರೋಪಿಗಳ ಜೊತೆ ಸೇರಿಕೊಂಡು ಅಪರಾಧವೆಸಗುವ ಏಕೋದ್ದೇಶದಿಂದ ಅಕ್ರಮಕೂಟವನ್ನು ರಚಿಸಿಕೊಂಡು ಅದರ ಸದಸ್ಯರಾಗುವ ಮೂಲಕ ಭಾರತ ದಂಡ ಸಂಹಿತೆ ಕಲಂ 143 ಸಹವಾಚಕ ಕಲಂ 149 ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಸದರಿ ಏಕೋದ್ದೇಶದಿಂದ ಮುಂದುವರೆದು, 6 ನೇ ಆರೋಪಿಯಾದ ನೀವು 1 ರಿಂದ 5 ನೇ ಆರೋಪಿಗಳ ಜೊತೆ ಸೇರಿಕೊಂಡು ಸದರಿ ಅಕ್ರಮ ಕೂಟದ ಸದಸ್ಯರಾಗಿ ದೊಂಬಿ ಮಾಡುವ ಮೂಲಕ ಭಾರತ ದಂಡ ಸಂಹಿತೆ ಕಲಂ 147 ಸಹವಾಚಕ ಕಲಂ 149 ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಸದರಿ ಏಕೋದ್ದೇಶದಿಂದ ಮುಂದುವರೆದು, 6 ನೇ ಆರೋಪಿಯಾದ ನೀವು 1 ರಿಂದ 5 ನೇ ಆರೋಪಿಗಳ ಜೊತೆ ಸೇರಿಕೊಂಡು ಚಾಸಾ-1 ಕು.ಎ.ಎಂ ಶೀಲಾ, ಚಾಸಾ-4 ಉಷಾನಂದಿನಿ ಮತ್ತು ಚಾಸಾ-5 ಕು ಲಕ್ಷ್ಮಮ್ಮ ರವರು ತಿಳುವಳಿಕೆ ಹೇಳಿದ್ದಕ್ಕೆ ಸದರಿಯವರಿಗೆ ನೀನ್ಯಾವಳೆ ಕೇಳುವುದಕ್ಕೆ ಬಾಯಿ

ಮುಚ್ಚಿಕೊಂಡು ನಿಂತುಕೊಳ್ಳೆ ನಿಮ್ಮಂತವರನ್ನು ಎಷ್ಟು ಜನ ನೋಡಿಲ್ಲ, ನಮಗೆ ನಿಮ್ಮ ಇಲಾಖೆಯ ಐ.ಜಿಗಳು ಮತ್ತು ಡಿ.ಜಿ ಗಳು ಚೆನ್ನಾಗಿ ಗೊತ್ತು, ಅವರಿಗೆ ಪೋನ್ ಮಾಡಿ ನಿಮಗೆ ಬುದ್ದಿ ಕಲಿಸುತ್ತೇವೆಂದು ಅವಾಚ್ಯ ಶಬ್ದಗಳಿಂದ ಬೈಯ್ಯುವ ಮೂಲಕ ಭಾರತ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 149 ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಸದರಿ ಏಕೋದ್ದೇಶದಿಂದ ಮುಂದುವರೆದು, 6ನೇ ಆರೋಪಿಯಾದ ನೀವು 1 ರಿಂದ 5ನೇ ಆರೋಪಿಗಳ ಜೊತೆ ಸೇರಿಕೊಂಡು ಚಾಸಾ-1 ಕು.ಎ.ಎಂ ಶೀಲಾ, ಚಾಸಾ-4 ಉಷಾನಂದಿನಿ ಮತ್ತು ಚಾಸಾ-5 ಕು ಲಕ್ಷ್ಮಮ್ಮ ರವರನ್ನು ಹಿಡಿದು ಎಳೆದಾಡಿ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸುವ ಮೂಲಕ ಭಾರತ ದಂಡ ಸಂಹಿತೆ ಕಲಂ 353 ಸಹವಾಚಕ ಕಲಂ 149 ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಸದರೀ ಅಪರಾಧಗಳು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತವೆ ಮತ್ತು ಸದರಿ ವಿಚಾರಣೆಯು ನನ್ನ ಸಮಕ್ಷಮ ನಡೆಯಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಈ ದೋಷಾರೋಪಣೆಯನ್ನು ಈ ದಿನ ದಿನಾಂಕಃ.16.01.2024 ರಂದು 6ನೇ ಆರೋಪಿತಳಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಆತನ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದೆ)

ಓ. ಹೇ. ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ಕನಕಪುರ

**<u>ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು ಕನಕಪುರ ಯವರ ನ್ಯಾಯಾಲಯ, ಕನಕಪುರ.</u>**

**<u>ಸಿ.ಸಿ. ನಂ.</u>**1347/2017

| | | |
|---|---|---|
| ಕನಕಪುರ ಪುರ ಪೊಲೀಸ್ ಠಾಣೆ | ವಿರುದ್ದ 6. | ಪಾರ್ವತಮ್ಮ ಉಃ ಪದ್ಮಮ್ಮ<br>ಕೋಂ ಜಯರಾಮಪ್ಪ<br>ವಯಸ್ಸು 40 ವರ್ಷಗಳು,<br>ವಾಸಃ ಸಿದ್ದರ್ಥಾನಗರ,<br>ಬೇಗೂರು ಹೋಬಳಿ<br>ಬೆಂಗಳೂರು |

**:: <u>ಆಪಾದನೆ</u> ::**

ನಿಮಗೆ ಓದಿ ಹೇಳಿದ ಆಪಾದನೆ ಅರ್ಥವಾಯಿತಾ**?**

ಉಃ

ನೀವು ತಪ್ಪು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕಾ**?**

ಉಃ

ಮೇಲಿನ ಹೇಳಿಕೆಯನ್ನು 6ನೇ ಆಪಾದಿತಳಿಗೆ ಓದಿ, ಹೇಳಿ, ತಿಳಿಸಿ ಅವರ ಹೇಳಿಕೆ ಪಡೆದುದಾಗಿ ದೃಢೀಕರಿಸುತ್ತೇನೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ಕನಕಪುರ

ಆರೋಪಿತರ ಸಹಿ

6.